## ತಾಸಿನೊಳಗೆ ಮೂರು ರೇಟು...

ಸುಮಾರು ಐವತ್ತು ವರುಷಗಳ ಹಿಂದಿನ ಮಾತು. ಒಂದು ದಿನ ನಮ್ಮಜ್ಜಿ ನೀರು ತರಲು ಹೋಗಿದ್ದಾಗ ದಾರಿಯಲ್ಲಿದ್ದ ಕುಂಬಾರನ ಮನೆ ಮುಂದೆ ಮಡಕೆ ಮಾರುತ್ತಿದ್ದುದನ್ನು ಕಂಡು, ಅದರ ಬೆಲೆ ಕೇಳಿದ್ದಾರೆ. ಅದಕ್ಕವನು ಹನ್ನೆರಡಾಣೆಗೆ ಒಂದು ಎಂದು ಹೇಳಿದ್ದಾನೆ. ಅಜ್ಜಿ ಮನೆಗೆ ಹೋಗಿ ಹಣ ತೆಗೆದುಕೊಂಡು ಬಂದಾಗ, ಅಲ್ಲಿದ್ದ ಇನ್ನೊಬ್ಬರು ಮಡಕೆ ಬೆಲೆ ಕೇಳಿದ್ದಾರೆ, ಅದಕ್ಕವನು ಮುಕ್ಕಾಲು ರೂಪಾಯಿ ಎಂದಿದ್ದಾನೆ. ಮತ್ತೊಬ್ಬರು ಕೇಳಿದಾಗ ಮೂರು ಪಾವಲಿ ಎಂದು ಹೇಳಿದ್ದಾನೆ. ಎಲ್ಲವನ್ನೂ ಕೇಳಿಸಿಕೊಂಡ ನಮ್ಮಜ್ಜಿ ಕೋಪಗೊಂಡು, 'ಅಲ್ಲಪ್ಪಾ, ಆಗಲೇ ನಾನು ಕೇಳಿಕೊಂಡು ಹೋದಾಗ ಹನ್ನೆರಡಾಣೆ ಎಂದು ಹೇಳಿದೆ, ಇನ್ನೊಬ್ಬರಿಗೆ ಮುಕ್ಕಾಲು ರೂಪಾಯಿಯಂತೆ ಕೊಟ್ಟೆ, ಮತ್ತೊಬ್ಬರಿಗೆ ಮೂರು ಪಾವಲಿ ಎಂದು ಹೇಳ್ತಿದ್ದೀಯಾ, ಒಂದು ತಾಸಿನೊಳಗೆ ಮೂರು ಬೆಲೆ ಹೇಳ್ತಿದ್ದೀಯಾ?' ಎಂದು ತರಾಟೆಗೆ



ತೆಗೆದುಕೊಂಡಿದ್ದಾರೆ. ಅದಕ್ಕವನು, 'ಹನ್ನೆರಡಾಣೆ ಅಂದ್ರೂ, ಮುಕ್ಕಾಲು ರೂಪಾಯಿ ಅಂದ್ರೂ, ಮೂರು ಪಾವಲಿ ಅಂದ್ರೂ ಎಲ್ಲಾ ಒಂದೇ ಕಣಮ್ಮಾ' ಎಂದು ತಿಳಿಹೇಳುವಷ್ಟರಲ್ಲಿ ಸುಸ್ತು.

**ಎಲ್.ಆರ್. ಚಂದ್ರಶೇಖರ್**

---



**ಕಲೆ: ಗಣೇಶ ಆಚಾರ್ಯ**

## ಮೇಡ್ ಫಾರ್ ಈಚ್ ಅದರ್

ನನ್ನ ಸ್ನೇಹಿತ ಎಷ್ಟೋ ದಿನಗಳ ನಂತರ ತಡವಾಗಿ ಮದುವೆ ಆದ. ತಡವಾದರೂ ಅಡ್ಡಿಯಿಲ್ಲ, ನೋಡಲು ಇಬ್ಬರೂ ಅನುರೂಪವಾಗಿ ಕಾಣುತ್ತಿದ್ದರು. ನಾವೆಲ್ಲರೂ ಊಟಕ್ಕೆ ಮುಂಚೆ ಹೋಗಿ ವಿಷ್ ಮಾಡಿ, ಸ್ಟೈಲಾಗಿ ಫೋಟೊಗೆ ಪೋಸ್ ಕೊಟ್ಟೆವು. ನಮ್ಮ ಕಿಲಾಡಿ ಗೆಳೆಯನೊಬ್ಬ, ಇಬ್ಬರ ಮುಂದೆ ನಿಂತು ಕೈಕುಲುಕಿ, 'ಮೇಡ್ ಫಾರ್ ಈಚ್ ಅದರ್' ಎಂದು ಹೊಗಳಿದ. ತಕ್ಷಣ ಇನ್ನೊಬ್ಬ ಗೆಳೆಯ ಸುಮ್ಮನಿರದೆ, 'ಈ ಜಗತ್ತಿನಲ್ಲಿ ಮೇಡ್ ಫಾರ್ ಈಚ್ ಅದರ್ ಅಂತ ತಯಾರಾಗೋದು ಶೂ ಮತ್ತು ಚಪ್ಪಲ್‌ಗಳು ಮಾತ್ರ... ಒಂದನ್ನು ಬಿಟ್ಟು ಇನ್ನೊಂದರ ಅಸ್ತಿತ್ವವೇ ಶೂನ್ಯ ಅಂತ ಇರೋದು ಅವುಗಳೇ' ಎನ್ನಬೇಕೆ? ಸುತ್ತ ಇದ್ದವರು ಅರೆಕ್ಷಣ ದಂಗಾದರು!.ಪಾಪ ವಧು–ವರರು ಜೋಕ್‌ಗೆ ಜೋಲಿ ಹೊಡೆದರು.

**ರಾಮಕೃಷ್ಣ ಗೋಖಲೆ**